INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,46- 53
Peer Reviewed Journal, Referred Journal

# ಹುಣಸೂರು ತಾಲ್ಲೂಕಿನ ವೈಷ್ಣವ ದೇವಾಲಯಗಳು – ಒಂದು ಅವಲೋಕನ

ಡಾ.ದಿಲೀಪ್.ಎಸ್[1]

ಹುಣಸೂರು ತಾಲ್ಲೂಕಿನಲ್ಲಿ ಅನೇಕ ದೇವಾಲಯಗಳು ಕಂಡುಬಂದಿರುತ್ತವೆ. ಈ ದೇವಾಲಯಗಳು ಚೋಳ,ಹೊಯ್ಸಳ,ಗಂಗ,ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿರುತ್ತವೆ. ಪ್ರಸ್ತುತ ಬಹುಮುಖ್ಯವಾಗಿ ಈ ರಾಜಮನೆತನಗಳು ವೈಷ್ಣವ ಮತಾವಾಂಬಿಗಳಾಗಿ ನಿರ್ಮಾಣ ಮಾಡಿರುವ ದೇವಾಲಯಗಳನ್ನು ಕುರಿತು ಒಂದು ಅವಲೋಕನವನ್ನು ಈ ಮುಂದಿನಂತೆಯೇ ಮಾಡಲಾಗಿರುತ್ತದೆ.

ಹುಣಸೂರು ತಾಲೋಕಿನ ಮರೂರು ಗ್ರಾಮದಲ್ಲಿರುವ ಆಂಜನೇಯ ದೇವಾಲಯವು ಇದೇ, ಮರೂರು ಗ್ರಾಮವು ಹುಣಸೂರು ತಾಲ್ಲೂಕಿನಿಂದ ಸುಮಾರು 20ಕಿಲೋಮೀಟರ್ ದೂರದಲ್ಲಿದೆ. ಗ್ರಾಮದ ಮಧ್ಯದಲ್ಲಿ ಈ ದೇವಾಲಯವನ್ನು ನಿರ್ಮಿಸಿದ್ದಾರೆ. ಇದು ಯಾವ ಕಾಲದ ದೇವಾಲಯ ಎಂದು ತಿಳಿದುಬಂದಿಲ್ಲ ಆದರೆ ಅತಿ ಪ್ರಾಚೀನ ಎಂದು ಹೇಳಬಹುದು. ಗರ್ಭಗುಡಿಯನ್ನು ಬಿಟ್ಟು ಬೇರೇನು ಉಳಿದಿಲ್ಲ. ಗರ್ಭಗುಡಿಯಲ್ಲಿ ಆಂಜನೇಯಸ್ವಾಮಿಯ ಶಿಲಾವಿಗ್ರಹವಿದೆ. ಇದು ಕಲ್ಲಿನ ಆಂಜನೇಯನ ಮೇಲೆ ಹಿತ್ತಾಳೆಯ ಕವಚ ಮಾಡಿ ಹೊದಿಸಲಾಗಿದೆ. ಗರ್ಭಗುಡಿಯ ಸುತ್ತಲು ದೇವಾಲಯದ ಇತರ ವಾಸ್ತು ಭಾಗಗಳನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಧರ್ಮಾಪುರದ ಚನ್ನಕೇಶವ ದೇವಾಲಯವು ಹುಣಸೂರಿನಿಂದ ಹದಿನಾಲ್ಕು ಕಿಲೋಮೀಟರ್ ದೂರದಲ್ಲಿ ಗದ್ದಿಗೆ ಮಾರ್ಗದಲ್ಲಿದೆ. ಮೈಸೂರಿನಿಂದ ಬೋಗಾದಿ ಮಾರ್ಗವಾಗಿ ಸುಮಾರು 40ಕಿ.ಮೀ.ದೂರದಲ್ಲಿ ಧರ್ಮಾಪುರ ಗ್ರಾಮದಲ್ಲಿ ಚೆನ್ನಕೇಶವ ದೇವಾಲಯವಿದೆ. ಇಲ್ಲಿ ಕೇಶವ, ಅಷ್ಟದಿಕ್ಪಾಲಕರು (ಇಂದ್ರ–ಪೂರ್ವ, ಅಗ್ನಿ–ಆಗ್ನೇಯ, ಯಮ–ದಕ್ಷಿಣ, ನಿರುತಿ–ನೈರುತ್ಯ, ವರುಣ–ಪಶ್ಚಿಮ, ವಾಯುವ್ಯ–ವಾಯು, ಕುಭೇರ–ಉತ್ತರ, ಈಶಾನ್ಯ–ಈಶಾನ್ಯ) ದ್ವಾರಪಾಲಕರು, ಲಲಾಟಬಿಂಬದಲ್ಲಿ ಲಕ್ಷ್ಮಿ, ಗಣೇಶ, ಹನುಮಾನ್. ಧರ್ಮಾಪುರ ಗ್ರಾಮವು ಹುಣಸೂರು ತಾಲ್ಲೂಕಿನ ಕೇಂದ್ರದಿಂದ 14ಕಿ.ಮೀ. ದೂರದಲ್ಲಿದೆ. ಧರ್ಮಾಪುರ ಗ್ರಾಮದ ಕೇಂದ್ರದಿಂದ ಪಶ್ಚಿಮಕ್ಕೆ ದೇವಾಲಯವಿದೆ. ಈ ಚನ್ನಕೇಶವ

---

1. ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,ನಿಸರ್ಗ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಕೋಳ್ಳೆಗಾಲ.

ದೇವಾಲಯವು ಪೂರ್ವಾಭಿಮುಖವಾಗಿದೆ. ಹುಣಸೂರು ತಾಲ್ಲೂಕಿನಲ್ಲಿರುವ ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಇದು ಪ್ರಮುಖ. ಗರ್ಭಗೃಹ ಸುಖನಾಸಿ, ನವರಂಗ, ಮುಖಮಂಟಪವನ್ನು ಹೊಂದಿದ್ದು, ಈಗ ಅಲ್ಲಿ ಎರಡು ಕಂಬಗಳು ಮಾತ್ರ ನಿಂತಿವೆ ಇದರಿಂದ ಮುಖಮಂಟಪ ಇತ್ತು ಎಂದು ಸ್ಪಷ್ಟವಾಗಿ ಗೋಚರವಾಗುತ್ತದೆ. ಮುಖದ್ವಾರದ ಮುಂಭಾಗದಲ್ಲಿ ಗಜಗಳನ್ನು ನಿಲ್ಲಿಸಲಾಗಿದೆ. ಸುಮಾರು 4 ಅಡಿ ಎತ್ತರದ ಜಗತಿಯನ್ನು ಒಳಗೊಂಡಿದೆ.

ಧರ್ಮಾಪುರದಲ್ಲಿ ಹೊಯ್ಸಳ ನರಸಿಂಹನ ಶಾಸನೋಕ್ತ ಮತ್ತು ತೇದಿಯುಕ್ತ ಅಂದರೆ ದಿನಾಂಕಯುಕ್ತ ದೇವಾಲಯವೊಂದು ಇದೆ. ಈ ದೇವಾಲಯಕ್ಕೆ ಕೇಶವ ದೇವಾಲಯ ಎಂದು ಕರೆಯಲಾಗಿದೆ. ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಚನ್ನಕೇಶವನನ್ನು ಪೂಜಿಸುತ್ತಿರುವುದರಿಂದ ಇದನ್ನು ಕೇಶವ ದೇವಾಲಯ ಎಂದು ಕರೆಯಲಾಗಿದೆ. ಮೈಸೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಅದರಲ್ಲು ಹುಣಸೂರು ತಾಲೂಕಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಯಾವುದೇ ಪ್ರಮುಖ ಹೊಯ್ಸಳ ದೇವಾಲಯಗಳು ಕಂಡುಬರುವುದಿಲ್ಲ. ಈ ದೇವಸ್ಥಾನ ಅತ್ಯಂತ ವಿಶಿಷ್ಟವಾದ ದೇವಸ್ಥಾನವಾಗಿದ್ದು ಹೊಯ್ಸಳರ ಕಾಲದ ದೇವಾಲಯದ ವಾಸ್ತುಶಿಲ್ಪಕ್ಕೆ ಅತ್ಯಂತ ಶ್ರೇಷ್ಠ ಉದಾಹರಣೆಯಾಗಿದೆ. ಹುಣಸೂರು ತಾಲ್ಲೂಕು ತನ್ನ ಇತಿಹಾಸದ ಗರ್ಭದಲ್ಲಿ ಇಂತಹ ಒಂದು ದೇವಾಲಯವನ್ನು ಪಡೆದಿರುವುದು ನಿಜವಾಗಿಯೂ ಇತಿಹಾಸ ಪ್ರಿಯರಿಗೆ, ಐತಿಹಾಸಿಕ ಸಂಶೋಧನೆಗೆ ಮಹತ್ವದ ಸಂಗತಿಯಾಗಿದೆ. ತಲಕಾಡಿನಲ್ಲಿ ಕೀರ್ತಿನಾರಾಯಣನನ್ನು ಸ್ಥಾಪಿಸಿದಂತಹ ವಿಷ್ಣುವರ್ಧನನ ಕಾಲದ ಅನಂತರ ಸುತ್ತಲು ಯಾವ ಭಾಗದಲ್ಲಿಯೂ ಹೊಯ್ಸಳರ ದೇವಾಲಯಗಳು ಕಂಡುಬರುವುದಿಲ್ಲ. ಮೈಸೂರಿನಲ್ಲಿ ಮಹಾಬಲೇಶ್ವರ, ಲಕ್ಷ್ಮೀಕಾಂತಸ್ವಾಮಿ ದೇವಾಲಯ ಮತ್ತು ಮೇಲುಕೋಟೆಯ ಚಲುವನಾರಾಯಣ, ತೊಂಡನೂರಿನ ನಂಬಿನಾರಾಯಣ ದೇವಾಲಯಗಳು ಪ್ರಸಿದ್ಧ ದೇವಾಲಯಗಳೆನಿಸಿವೆ. ಕೇಶವ ಎಂದರೆ ವಿಷ್ಣುವಿನ 24 ರೂಪದಲ್ಲಿ ಈ ರೂಪವು ಒಂದಾಗಿದೆ. ಈ 24 ಮೂರ್ತಿಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಕ್ರಮದಲ್ಲಿ ಅಂದರೆ ವೃತ್ತಾಕಾರವಾಗಿ ಹಿಡಿದಿರುವುದರಿಂದ ಕೇಶವ ಮೂರ್ತಿ ಎಂದು ಗುರುತಿಸಬಹುದು.

ದೇವಾಲಯದ ಹೊರಭಾಗದಲ್ಲಿ ದೇವಾಲಯದ ಎಡಭಾಗಕ್ಕೆ ಒಂದು ಕಲ್ಲು ಗಾಣವಿದೆ. ಕಲ್ಲುಗಾಣದ ಮೇಲೆ ಹೊಯ್ಸಳರ ಶಾಸನವಿದೆ. ಆದ್ದರಿಂದಾಗಿ ಈ ದೇವಸ್ಥಾನ ಅತ್ಯಂತ ವೈಭವದಿಂದ ಪೂಜೆಗೊಳ್ಳುತ್ತಿತ್ತು ಎಂಬುದನ್ನು ಮತ್ತು ನಿತ್ಯ ನಂದಾದೀಪಕ್ಕಾಗಿ ಗಾಣದಲ್ಲಿ ಆಡಿಸಿದ ಎಣ್ಣೆಯನ್ನು ದೇವರಿಗೆ ದೀಪಕ್ಕಾಗಿ ಬಳಸುತ್ತಿದ್ದರು ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ದೇವಾಲಯವು ಇಂದು ವೈಭವವನ್ನು ಕಳೆದುಕೊಂಡಿದ್ದರೂ ಸಹ ಪೂಜೆ ನಡೆಯುತ್ತಿದೆ. ಪೂಜೆ ಅಲ್ಲಿನ ಅಗ್ರಹಾರದ ಲಕ್ಷಣಗಳು ಇಂದಿಗೂ ಅಲ್ಲಿ ಕಂಡುಬರುತ್ತವೆ. ಈ ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನನ ಮಗನಾದ

ಒಂದನೆ ವೀರನರಸಿಂಹನು ಕಟ್ಟಿಸಿದನು. ದೇವಾಲಯದ ಮುಂಭಾಗದಲ್ಲಿ ಗಾಣದ ಪಕ್ಕದಲ್ಲಿ ದೇವಾಲಯವನ್ನು ಎತ್ತರವಾದ ಜಗತಿಯ ಮೇಲೆ ಕಟ್ಟಲಾಗಿದ್ದು, ದೇವಾಲಯಕ್ಕೆ ಏರಲು ಎರಡು ಆನೆಗಳಿಂದ ಅಲಂಕೃತವಾದ ಹಸ್ತಿಹಸ್ತ ಸೋಪಾನವನ್ನು ಕಟ್ಟಲಾಗಿದೆ. ಹಸ್ತಿ ಎಂದರೆ ಆನೆ, ಹಸ್ತ ಎಂದರೆ ಕೈ ಸೊಂಡಿಲು ಎಂದರ್ಥ. ಈ ಸೋಪಾನದ 2 ಭಾಗದಲ್ಲಿ ಆನೆಗಳನ್ನು ಅಳವಡಿಸಿರುವುದರಿಂದ ಇದಕ್ಕೆ ಹಸ್ತಿಹಸ್ತ ಸೋಪಾನ ಎಂದು ಕರೆಯಲಾಗಿದೆ. ಹಸ್ತಿಹಸ್ತ ಸೋಪಾನದಲ್ಲಿ ಹಸ್ತಿಯು ಅಂದರೆ ಆನೆಯು ಸಾಕಷ್ಟು ಶಿಥಿಲವಾಗಿರುವುದನ್ನು ಮತ್ತು ಜಾರಿಕೊಂಡಿರುವುದನ್ನು ನೋಡಬಹುದು. ಈ ದೇವಾಲಯವು ಪೂರ್ಣವಾಗಿ ಯಾವುದೇ ನಿರ್ವಹಣೆ ಇಲ್ಲದೆ ಸೊರಗಿದೆ. ಮುಂಭಾಗದಲ್ಲಿ ಒಂದು ಜಗತಿ ದೇವಾಲಯಕ್ಕೆ ಸೇರಿದಂತೆ ಇದ್ದು ಉಪಾನ, ಜಗತಿ, ಮಹಾ ಪದ್ಮ, ತ್ರಿಪಟ್ಟಕುಮುದ, ಆಲಿಂಗ ಮುಂತಾದ ವಾಸ್ತುಭಾಗಗಳನ್ನು ಹೊಂದಿದ್ದು ಎತ್ತರವಾದ ವೇದಿ ಇದೆ. ವೇದಿಯೂ ಕೂಡ ಅಲ್ಲಲ್ಲಿ ಜಾರಿಕೊಂಡಿದ್ದು ನಿರ್ವಹಣೆ ಶಿಥಿಲವಾಗಿದೆ. ಇನ್ನು ದೇವಾಲಯದ ತಳನಕ್ಷೆಯನ್ನು ಗಮನಿಸುವುದಾದರೆ ದೇವಾಲಯದಲ್ಲಿ ಮುಖ್ಯವಾಗಿ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಂಭಾಗದಲ್ಲಿ ತೆರೆದಮಂಟಪವಿದೆ. ಈ ದೇವಸ್ಥಾನಗಳಲ್ಲಿ ಮುಂದಿನ ನವರಂಗದಲ್ಲಿ ಮಾತ್ರ 9 ಅಂಕಣಗಳಿದ್ದು ನಾಲ್ಕು ಶ್ರೀಕಾರ ಮಾದರಿಯ ಸ್ತಂಬಗಳಿವೆ. ಶ್ರೀಕಾರ ಮಾದರಿಯ ಸ್ತಂಬಗಳನ್ನು ಬಿಟ್ಟು ಉಳಿದ ಯಾವ ಸ್ತಂಭಗಳು ಕಂಡುಬರುವುದಿಲ್ಲ. ಮುಂದೆ ಸುಂದರವಾದ ದ್ವಾರಬಂದಗಳೂ ನಮಗೆ ಕಂಡುಬರುತ್ತದೆ. ಇನ್ನು ಏರು ನಕ್ಷೆಯಲ್ಲಿ ಸಮಾನ್ಯವಾಗಿ ಸುಂದರವಾದಂತಹ ಅಧಿಷ್ಠಾನ ಅದರ ಮೇಲ್ಭಾಗದಲ್ಲಿ ಭಿತ್ತಿ ಇದ್ದು ಮುಂದಿನ ಎಲ್ಲ ಭಾಗಗಳು ನಾಶಗೊಂಡಿವೆ. ಷಡ್ವರ್ಗದ ದೇವಾಲಯವಾಗಿದ್ದಂತಹ ಈ ದೇವಾಲಯವು ತನ್ನ ವೈಭವವನ್ನು ಕಳೆದುಕೊಂಡು ಷಡ್ವರ್ಗದಲ್ಲಿನ ಕೇವಲ ಮೂರು ವರ್ಗಗಳನ್ನು ಮಾತ್ರ ಉಳಿಸಿಕೊಂಡಿದೆ. ವರ್ಗ ಎಂದರೆ ಸಂಸ್ಕೃತದಲ್ಲಿ ಗುಂಪು ಎಂದರ್ಥ. ಆದ್ದರಿಂದ ಅಧಿಷ್ಠಾನವರ್ಗ, ಭಿತ್ತಿವರ್ಗ, ಮತ್ತು ಕಪೋತವರ್ಗವು ಮಾತ್ರ ಉಳಿದು ಬಂದಿದ್ದು ಬೇರೆ ಎಲ್ಲ ರಚನೆಗಳು ನಾಶಗೊಂಡಿವೆ.

ದೇವಾಲಯದ ಏರುನಕ್ಷೆಯಲ್ಲಿ ಅಧಿಷ್ಠಾನದಲ್ಲಿ ಈಗಾಗಲೇ ಹೇಳಿದಂತೆ ಉಪಾನ, ಜಗತಿ, ಮಹಾಪದ್ಮ, ತ್ರಿಪಟ್ಟ ಕುಮುದ, ಮತ್ತು ಆಲಿಂಗಗಳು ಇದ್ದು, ಗೋಡೆಯಲ್ಲಿ ಅಲ್ಲಲ್ಲಿ ಸ್ತಂಭಿಕೆಗಳಿಂದ ಅಲಂಕರಿಸಲಾಗಿದೆ. ಸ್ತಂಭಿಕೆಗಳು ಮತ್ತು ಮಹಾಕಂಭಗಳ ಮಧ್ಯಭಾಗದಲ್ಲಿ ಭದ್ರದಲ್ಲಿ ಚಿಕ್ಕದಾದಂತಹ ದೇವಕೋಷ್ಟವನ್ನು ಗೋಪುರದ ಪ್ರತಿಕೃತಿಯನ್ನು ನಾವು ಕಾಣಬಹುದು. ಮೇಲ್ಭಾಗದ ಕಪೋತವು ಸುಂದರವಾಗಿದ್ದರು, ಅನೇಕ ಗಿಡಗಂಟೆಗಳು ಬೆಳೆದು ನಾಶದ ಸ್ಥಿತಿಗೆ ತಲುಪುತಿದೆ. ಇನ್ನು ಗರ್ಭಗೃಹದ ಹಿಂಭಾಗದ ಗೋಡೆಗಳನ್ನು ಅತ್ಯಂತ ದೊಡ್ಡದಾದ ಕಲ್ಲುಗಳಿಂದ ಪಕ್ಕಕ್ಕೆ ಒರಗಿಸಿ ಆ ದೇವಾಲಯವು ಜಾರಿ ಬೀಳದಂತೆ ತಡೆಹಿಡಿಯಲಾಗಿದೆ. ಒಟ್ಟು ದೇವಾಲಯವು ನಿರ್ವಹಣೆಯಿಲ್ಲದೆ ಅತ್ಯಂತ ಶೋಚನೀಯವಾದಂತಹ ಸ್ಥಿತಿಯಲ್ಲಿ ಇರುವುದು ಕಂಡುಬರುತ್ತದೆ. ಪ್ರತಿಯೊಂದು ಭಾಗಕ್ಕೂ ಕೂಡ,

ಎರಡು ಸ್ಥಂಭಿಕೆಗಳು ಒಂದು ಕಂಬಗಳ ಮಧ್ಯದಲ್ಲಿ ಒಂದು ಗರ್ಭಕೋಷ್ಠದ ಅಲಂಕರಣವಿದೆ. ಅಷ್ಟದಿಕ್ಪಾಲಕರ ದೇವಕೋಷ್ಠದ ಮಧ್ಯಭಾಗದಲ್ಲಿ ಉಬ್ಬುಶಿಲ್ಪ ರೂಪದಲ್ಲಿ ಕೆತ್ತಲಾಗಿದೆ. ಅಷ್ಟದಿಕ್ಪಾಲಕರ ಜೊತೆಯಲ್ಲಿ ನಮಗೆ ಕಂಡುಬರುವ, ಆಂಜನೇಯ ಮತ್ತು ಗಣಪತಿಯ ಚಿತ್ರಗಳು ಕೂಡ ಗಮನ ಸೆಳೆಯುತ್ತವೆ. ಅಂತಹ ವಿಶೇಷವಾದ ಅಲಂಕರಣಗಳೇನು ಕಂಡುಬರುವುದಿಲ್ಲ. ಆದರೆ ದೇವಾಲಯವು ವಿಶೇಷವಾಗಿದ್ದು, ವಿಶಿಷ್ಟವಾಗಿದ್ದು ಅತ್ಯಂತ ದೊಡ್ಡದಾಗಿ ಮೂಡಿಬಂದಿದೆ. ಆದರೆ ಈ ದೇವಾಲಯಕ್ಕೆ ಬಳಸಿರುವ ಕಲ್ಲನ್ನು ನಾವು ನೋಡಿದರೆ, ಸಾಮಾನ್ಯ ಗ್ರಾನೈಟ್ ಕಲ್ಲಿನಂತೆ ಕಂಡುಬರುವುದೇ ಹೊರತು ಇದು ಹೊಯ್ಸಳರ ಕಾಲದ ಸೋಪುಗಲ್ಲಿ (ಕ್ಲೋರೋಸಿಸ್ಟ್ ಕಲ್ಲಿನಂತೆ)ನಂತೆ ಕಂಡುಬರುವುದಿಲ್ಲ. ಎಡ ಮತ್ತು ಬಲಭಾಗದಲ್ಲಿತೂ ಕೂಡ ದೇವಾಲಯದ ರಕ್ಷಣೆಗಾಗಿ ಕಲ್ಲುಗಳನ್ನು ನಿಲ್ಲಿಸಲಾಗಿದೆ. ಕಪೋತದ ಜಾಗದಲ್ಲಿ ಅನೇಕ ನಾಳಸೂತ್ರಗಳನ್ನು ನಾವು ನೋಡಬಹುದು. ಮೇಲ್ಭಾಗದಲ್ಲಿ ಬಿದ್ದ ನೀರು ಕೆಳಭಾಗಕ್ಕೆ ಹರಿಯಲು ಸುಂದರವಾದಂತಹ ನಾಳಸೂತ್ರಗಳನ್ನು ಅಳವಡಿಸಿದ್ದಾರೆ. ಕಪೋತವು ಅಲ್ಲಲ್ಲಿ ಮುರಿದು ಹೋಗಿದೆ. ಕಪೋತವು ಕೂಡ ಅತ್ಯಂತ ವಿಶಾಲವಾಗಿ ಹರಡಿಕೊಂಡಿರು ವಂತಹ ಕಂಬದಂತಿಲ್ಲದೆ, ಸಾಮಾನ್ಯವಾದ ಕಪೋತದಂತೆ ಕಂಡುಬರುತ್ತದೆ. ಇನ್ನು ಗೋಪುರದ ಅಲಂಕರಣಗಳಲ್ಲಿ ದೇವಕೋಷ್ಟದ ಪ್ರತಿಕೃತಿಯಲ್ಲಿ ಅನೇಕ ವಿಧದ ಗೋಪುರಗಳನ್ನಾಗಿ ಅಲಂಕರಿಸಿರುವುದು ಕಂಡುಬರುತ್ತದೆ. ಇನ್ನು ದೇವಾಲಯದ ಒಳಭಾಗದಲ್ಲಿ ಇಬ್ಬರು ಮಹಾ ದ್ವಾರಪಾಲಕರಿದ್ದು, ಅದು ಕೂಡ ಕೋಷ್ಟಕದಲ್ಲಿದೆ. ದೇವಾಲಯದ ದ್ವಾರಬಂಧವು ನವಶಾಖಾ ಮಾದರಿಯ ದ್ವಾರಬಂಧಗಳಾಗಿದ್ದು. ಸುಂದರವಾದ ಅಲಂಕರಣಗಳಿಂದ ಕೂಡಿದೆ. ದೇವಾಲಯದ ಮುಂಭಾಗಕ್ಕೆ ಹಸಿರು ಬಣ್ಣವನ್ನು ಹೊಡೆದಿದ್ದು ವಿಚಿತ್ರವಾಗಿ ಕಾಣುತ್ತದೆ. ದೇವಾಲಯದ ಒಳಭಾಗಕ್ಕೆ ಹೋಗುವಾಗ ನಾವು ನವರಂಗದ ಮುಂದಿನ ದ್ವಾರಬಂಧದಲ್ಲಿ ಇಬ್ಬರು ದ್ವಾರಪಾಲಕರು ಮತ್ತು ಲತಾಬಳ್ಳಿ ಮುಂತಾದ ದ್ವಾರ ಶಾಖೆಗಳು ಹಾಗೂ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರಣವನ್ನು ಕಾಣಬಹುದು.

ಹೊಯ್ಸಳರು ಅವರ ಕಾಲದಲ್ಲಿ ವಾಸ್ತು ಹಾಗೂ ಶಿಲ್ಪಕಲೆಗೆ ವಿಶಿಷ್ಟವಾದ ಸ್ಥಾನವನ್ನು ತಂದುಕೊಟ್ಟರು. ಅವರಿಗೆ ಈ ಎಲ್ಲಾ ಶಿಲ್ಪಕಲೆಗೆ ನೀಡಿದ ಕೊಡುಗೆ ಸಲ್ಲುತ್ತದೆ. ಏಕೆಂದರೆ ಹೊಯ್ಸಳರ ವಾಸ್ತು ಮತ್ತು ಕಲೆಯ ಪರಿಚಯವನ್ನು ಪಡೆಯುವುದಕ್ಕಿಂತ ಮುಂಚೆ ವಾಸ್ತು ಪ್ರಕಾರಗಳು ಬೇರೆ ಬೇರೆ ಗ್ರಂಥಗಳ ಆಧಾರದ ಮೇಲೆ ನಿಂತಿವೆ ಎಂಬುದನ್ನು ತಿಳಿಯಬೇಕು. ವಾಸ್ತುಶಿಲ್ಪ ಎಂಬುದು ಕಟ್ಟಡಗಳ ನಿರ್ಮಾಣವನ್ನು ಪ್ರತಿಬಿಂಬಿಸಿದರೆ ಶಿಲ್ಪಕಲೆ ಕಟ್ಟಡಗಳಲ್ಲಿ ಕಂಡುಬರುವ ಶಿಲ್ಪಗಳ ಬಗೆಯನ್ನು ತಿಳಿಸುತ್ತದೆ. ಭಾರತದಲ್ಲಿ ವಾಸ್ತುಶಿಲ್ಪದಲ್ಲಿ 3 ವಿಧಗಳು ಅದು ದ್ರಾವಿಡ, ನಾಗರ, ವೇಸರ ಎಂದು 3 ಪ್ರಕಾರಗಳನ್ನು ಕಾಣಬಹುದು. ದ್ರಾವಿಡ ಎಂದರೆ ದಕ್ಷಿಣಭಾರತದಲ್ಲಿ (ಆಂಧ್ರ, ತಮಿಳುನಾಡು, ಕರ್ನಾಟಕ, ಕೇರಳ)

ಕಂಡುಬರುವಂತಹ ಪ್ರಕಾರ, ವೇಸರ ಎಂದರೆ ವೃತ್ತ ಅಥವಾ ವೃತ್ತಾಯತ ಮಾದರಿಯನ್ನು ಒಳಗೊಂಡಿದೆ ಕೆಲವರು ಇದನ್ನು ನಾಗರ ಮತ್ತು ದ್ರಾವಿಡ ಶೈಲಿಯ ಮಿಶ್ರಣವನ್ನು ವೇಸರಶೈಲಿ ಎಂದು ಕರೆಯುವರು.

ಮರದೂರು ಗ್ರಾಮದ ಗೋಪಾಲಸ್ವಾಮಿ ದೇವಾಲಯವು 12ನೇ ಶತಮಾನದ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರುವ ಲಕ್ಷ್ಮೀ ಸಮೇತ ಗೋಪಾಲಸ್ವಾಮಿ ದೇವಾಲಯವೊಂದು ತನ್ನ ಗತ ಇತಿಹಾಸವನ್ನು ಸಾರುತ್ತಿದೆ. ಆಳೆತ್ತರದ ಗಾತ್ರದ ಚಪ್ಪಡಿಕಲ್ಲುಗಳಿಂದ ನಿರ್ಮಿತವಾಗಿರುವ ಸರಿಸುಮಾರು 30ಅಡಿ ಅಗಲ, 50ಅಡಿ ಉದ್ದದ ಈ ದೇವಾಲಯ ಅತ್ಯಂತ ಆಕರ್ಷವಾಗಿ ಕಾಣುತ್ತದೆ. ದೇವಾಲಯದ ಮುಂಭಾಗದಲ್ಲಿ ಸ್ವಾಗತ ಮಂಟಪವಿದ್ದು, ಮಂಟಪದ ಮುಂಭಾಗದ ದ್ವಾರದ ಎರಡೂ ಬದಿಯಲ್ಲಿ ದ್ವಾರಪಾಲಕರನ್ನು ಚಿತ್ರಿಸಲಾಗಿದೆ. ದೇವಸ್ಥಾನದ ಒಳಹೊಕ್ಕರೆ ಗವ್ವೆನ್ನುವ ಕತ್ತಲೆ ಕಣ್ಣನ್ನು ಕತ್ತಲಾಗಿಸುತ್ತದೆ. ಗರ್ಭಗುಡಿಯ ಮುಂಭಾಗ ವಿಶಾಲವಾದ ಪ್ರಾಂಗಣವಿದ್ದು, ಗರ್ಭಗುಡಿಯ ದ್ವಾರಕ್ಕೆ ಹೊಂದಿಕೊಂಡಂತೆ ಎರಡೂ ಬದಿಯಿರುವ ಆರು ಕಲ್ಲುಕಂಬಗಳು ದೇವಾಲಯಕ್ಕೆ ಸೊಬಗನ್ನು ಹೆಚ್ಚಿಸಿದೆ. ಕಂಬಗಳಲ್ಲಿ ಆಕರ್ಷಕ ಕೆತ್ತನೆಯಿಲ್ಲದಿದ್ದರೂ ದೇವಾಲಯದ ಅಂದವನ್ನು ಹೆಚ್ಚಿಸಿದೆ. ದೇವಾಲಯದ ಮುಖ್ಯದ್ವಾರದಲ್ಲಿ ಹಿಂಬದಿಯಿಂದ ಒಂದು ಸಾಲಿನ ಶಾಸನವನ್ನು ಕೆತ್ತಲಾಗಿದೆ. ಈ ಶಾಸನವನ್ನು ತಿಳಿದಲ್ಲಿ ಈ ದೇವಸ್ಥಾನದ ಇತಿಹಾಸವನ್ನು ತಿಳಿಯಬಹುದಾಗಿದೆ. ದೇವಾಲಯದ ಸುಖನಾಸಿಯ ಮೇಲ್ಛಾವಣಿಯಲ್ಲಿ ಹೊಯ್ಸಳರ ಶೈಲಿಯಲ್ಲಿ ವೃತ್ತಾಕಾರವಾಗಿ ಕೆತ್ತನೆ ಇದೆ. ಆಗಿನ ರಾಜ್ಯದ ಮುಖ್ಯಮಂತ್ರಿ ಡಿ.ದೇವರಾಜ ಅರಸರಿಗೆ ವಿಷಯ ತಿಳಿದು ಕೂಡಲೇ ಮೈಸೂರಿನ ಆಗಿನ ಕಮಿಷನರ್‌ಗೆ ವಿಷಯ ತಿಳಿಸಿದಾಗ ವಿಗ್ರಹಗಳನ್ನು ಸಾಗಿಸುವ ವೇಳೆ ಮಾರ್ಗಮಧ್ಯೆ ಅರಬ್ಬಿತಿಟ್ಟಿನ ಬಳಿ ಅರ್ಚಕರು ವಿಗ್ರಹ ಸಮೇತ ಸಿಕ್ಕುಬಿದ್ದರು. ನಂತರ ದೇವರ ಮೂರ್ತಿಗಳು ಇಲ್ಲಿರುವುದು ಸರಿಯಲ್ಲವೆಂದು ತಿಳಿದ ಮುಖ್ಯಮಂತ್ರಿಗಳು 1970ರಲ್ಲಿ ಎರಡೂ ವಿಗ್ರಹಗಳನ್ನು ಅಲ್ಲಿಂದ ಹುಣಸೂರು ಪಟ್ಟಣದ ಬ್ರಾಹ್ಮಣರ ಬೀದಿಯ ಲಕ್ಷ್ಮಣತೀರ್ಥ ನದಿತಟದಲ್ಲಿರುವ ನರಸಿಂಹಸ್ವಾಮಿ ದೇವಾಲಯಕ್ಕೆ ತಂದಿಡಲು ತಿಳಿಸಿದರು. 1992ರಲ್ಲಿ ನರಸಿಂಹಸ್ವಾಮಿ, ಎಡಬಲದಲ್ಲಿ ಲಕ್ಷ್ಮೀ ಹಾಗೂ ಗೋಪಾಲಸ್ವಾಮಿಯನ್ನು ಪ್ರತಿಷ್ಠಾಪಿಸಲಾಯಿತೆಂದು ತಿಳಿಸುತ್ತಾರೆ. ಲಕ್ಷ್ಮೀ ಎರಡೂವರೆ ಅಡಿಯಿದ್ದರೆ ಗೋಪಾಲಸ್ವಾಮಿ ಐದು ಅಡಿ ಎತ್ತರವಿದ್ದಾನೆ.

ಕಟ್ಟೆ ಮಳಲವಾಡಿಯ ವೆಂಕಟೇಶ್ವರ ದೇವಾಲಯವು ಹುಣಸೂರಿನಿಂದ 6 ಕಿಲೋಮೀಟರ್ ದೂರದಲ್ಲಿ ಕೆ.ಆರ್.ನಗರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿದೆ. ಇಲ್ಲಿ ವೆಂಕಟರಮಣ, ಜಯ, ವಿಜಯ, ಹೊರಭಾಗದಲ್ಲಿ ಆನೆ, ಸಿಂಹ, ಕಾಳಿಂಗ ಮರ್ಧನ, ಗರುಡ, ಹನುಮ, ಚಿಕ್ಕಗುಡಿಗಳು (ಮೇಲ್ಭಾಗದ ಕೋಷ್ಟಕಗಳು). ಹುಣಸೂರು ತಾಲ್ಲೂಕಿನಿಂದ 6 ಕಿಲೋಮೀಟರ್ ದೂರದಲ್ಲಿ ಉತ್ತರಕ್ಕೆ ಕೃಷ್ಣರಾಜ ನಗರ ತಾಲ್ಲೂಕಿಗೆ ಹೋಗುವ ಮಾರ್ಗಮಧ್ಯದಲ್ಲಿ ಕಟ್ಟೆಮಳಲವಾಡಿ ಸಿಗುತ್ತದೆ. ಲಕ್ಷ್ಮಣ ತೀರ್ಥನದಿಯ ದಡದಲ್ಲಿ

ಕಟ್ಟೆಮಳಲವಾಡಿ ಗ್ರಾಮವು ನೆಲೆಯೂರಿದೆ. ಇಲ್ಲೊಂದು ವೈಷ್ಣವ ಧರ್ಮಕ್ಕೆ ಸೇರಿದ ವೆಂಕಟರಮಣ ದೇವಾಲಯವು ಗ್ರಾಮದ ಕೇಂದ್ರಭಾಗದಿಂದ ಒಳಭಾಗದಲ್ಲಿದೆ.

ವೆಂಕಟರಮಣಸ್ವಾಮಿ ದೇವಾಲಯವು ನಾಲ್ಕು ಅಂಕಣದ ಗರ್ಭಗುಡಿಯನ್ನು ಒಳಗೊಂಡಿದೆ. ಒಳಗೆ ವೆಂಕಟೇಶ್ವರಸ್ವಾಮಿಯ ಮೂರ್ತಿಯು ಕಂಡುಬರುತ್ತದೆ. ಸುಕನಾಸಿಯು ಸಹ ಇದೆ. ಅದರ ಮುಂಭಾಗದಲ್ಲಿ ನವರಂಗವನ್ನು ಕಾಣಬಹುದು. ನವರಂಗದ ಬಾಗಿಲ ಬಳಿ ಜಯ ವಿಜಯರ ಶಿಲ್ಪವನ್ನು ಕೆತ್ತಲಾಗಿದೆ ಹಾಗು ನವರಂಗದಲ್ಲಿ ನಾಲ್ಕು ಕಂಬಗಳನ್ನು ನಿಲ್ಲಿಸಲಾಗಿದ್ದು, ಕಂಬಗಳು ಚಿತ್ರಖಂಡ ಮಾದರಿಯ ಸ್ತಂಭಗಳಾಗಿವೆ. ಹಾಗೆಯೇ, ಬೊದಿಗೆಗಳನ್ನು ಒಳಗೊಂಡಿದೆ. ಸ್ತಂಭಗಳಲ್ಲಿ ಹಲವು ನಕ್ಷತ್ರಾಕಾರದ ಹಸೆಯ ಚಿತ್ರಗಳನ್ನು ಕಾಣಬಹುದು. ಹೊರಭಾಗದಲ್ಲಿ ದೇವಾಲಯದ ಮೇಲೆ ಕೋಷ್ಟಕಗಳಿದ್ದು, ಕಾಳಿಂಗ ಮರ್ದನ ಮಾಡುತ್ತಿರುವ ಶ್ರೀಕೃಷ್ಣನನ್ನು ಕಾಣಬಹುದು. ಅವನ ಎಡಭಾಗದಲ್ಲಿ ಗರುಡನ ಶಿಲ್ಪವಿದೆ. ಬಲಭಾಗದಲ್ಲಿ ಹನುಮಂತನ ಶಿಲ್ಪವಿದೆ ಹಾಗೂ ಕೋಷ್ಟಕಗಳ ಎಡ ಬಲಗಳಲ್ಲಿ 2 ಸಿಂಹವನ್ನು ಪೂರ್ವದಿಕ್ಕಿಗೆ ನಿಲ್ಲಿಸಲಾಗಿದೆ. ಈ ದೇವಾಲಯ ವಿಜಯನಗರ ಕಾಲದ ತಿರುಮಲನ ಕಾಲದಲ್ಲಿ ಅವನ ಪ್ರಮುಖ ಮಾಂಡಲೀಕ ರಾಮರಾಜ ತಿರುಮಲರಾಯ ನಿರ್ಮಿಸಿದ್ದಾನೆ ಎಂದು ಹೇಳಬಹುದು.

ಬಿಳಿಕೆರೆಯ ಲಕ್ಷ್ಮೀಕಾಂತ ದೇವಾಲಯ ಮೈಸೂರಿನಿಂದ ಹುಣಸೂರಿಗೆ ಹೋಗುವ ಮಾರ್ಗ ಮಧ್ಯದಲ್ಲಿದೆ. ಇಲ್ಲಿ ಶಿಲ್ಪಗಳಾಗಿ; ಹಂಸ, ಪದ್ಮ, ಕೇತಕಿ, ಜೋಗಿ, ಹನುಮ, ಆನೆ, ಸರ್ಪ, ಬಲಕಂಬದಲ್ಲಿ ಜಲಚರ ಪ್ರಾಣಿಗಳು. ಬಿಳಿಕೆರೆಯ ಲಕ್ಷ್ಮೀಕಾಂತಸ್ವಾಮಿ ದೇವಾಲಯದ ವಿಶೇಷತೆ ಎಂದರೆ ವಿಜಯನಗರ ಕಾಲದ ದೇವಾಲಯವಾಗಿದ್ದು, ವಿಜಯನಗರ ಶೈಲಿಯಲ್ಲಿ ನಿರ್ಮಿತಿಯಾಗಿದೆ. ಗರ್ಭಗೃಹ, ಸುಕನಾಸಿ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಮುಖಮಂಟಪವು ಸುಂದರವಾಗಿ ಮೂಡಿಬಂದಿದೆ. ಅಧಿಷ್ಠಾನ, ಭಿತ್ತಿ ಬಿಟ್ಟರೆ ಉಳಿದೆಲ್ಲ ಭಾಗಗಳನ್ನು ನವಿಕರಿಸಲಾಗಿದ್ದು ಸೀಮೆಂಟ್‌ನಿಂದ ಕಟ್ಟಲಾಗಿದೆ. ದೇವಾಲಯದ ಮುಂಭಾಗದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ಮುಂಭಾಗದ ಬಾಗಿಲಿದೆ. ಬಾಗಿಲಿನ ಮೇಲ್ಭಾಗದಲ್ಲಿರುವ ರಾಜಗೋಪುರವನ್ನು ಸಹ ಸಿಮೆಂಟಿನಿಂದ ನಿರ್ಮಿಸಲಾಗಿದೆ. ಸೋಪಾನವಿದ್ದು, ಮೂರು ಸೋಪಾನಗಳಿಂದ ಕೂಡಿದೆ. ಮುಂಭಾಗದಲ್ಲಿ ನಾಲ್ಕು ಕಂಬಗಳಿಂದ ಕೂಡಿದ್ದು ಕಂಬಗಳಲ್ಲಿಯೂ ಮತ್ತು ಮೇಲ್ಭಾಗದ ತೊಲೆಗಳಲ್ಲಿ ಅನೇಕ ಅಲಂಕರಣಗಳನ್ನು ಒಳಗೊಂಡಿದೆ. ಕಂಬಗಳೆಲ್ಲವೂ ಕೂಡ ಸಾಮಾನ್ಯವಾಗಿ ಚಿತ್ರಖಂಡ ಸ್ತಂಭಗಳಾಗಿದೆ. ಕಂಬಗಳಲ್ಲಿ ಹನುಮಂತನ ಹಾಗೆಯೇ ಗರುಡನ ವಿಗ್ರಹಗಳಿವೆ.

ದೇವಾಲಯದ ಹಿಂಭಾಗದ ಭಿತ್ತಿಯಲ್ಲಿ ಮೀನಿನ ಚಿತ್ರವಿದೆ. ದೇವಾಲಯದ ಮೇಲ್ಭಾವಣಿಯಲ್ಲಿ ಸುಂದರವಾದ ಹಾವಿನ ಚಿತ್ರವನ್ನು ಕೆತ್ತಲಾಗಿದೆ. ಪಕ್ಕದ ಗೋಡೆಯಲ್ಲಿ ಆಮೆಯ ಚಿತ್ರವಿದೆ. ಲಕ್ಷ್ಮೀಕಾಂತ

ದೇವಾಲಯವು ಬಿಳಿಕೆರೆ ಗ್ರಾಮದ ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಇದನ್ನು ನಿರ್ಮಿಸಲಾಗಿದೆ. ಇದು ವಿಜಯನಗರ ಕಾಲದ ದೇವಾಲಯ ಎಂದು ಹೇಳಬಹುದು. ಈ ದೇವಾಲಯವು ಒಂದು ಅಂಕಣದ ಗರ್ಭಗೃಹವನ್ನು, ಒಂದು ಅಂಕಣದ ಸುಕನಾಸಿಯನ್ನು, ನಾಲ್ಕು ಅಂಕಣದ ನವರಂಗವನ್ನು ಒಳಗೊಂಡಿದೆ. ಮುಂದುಗಡೆ ಹಸ್ತಿಹಸ್ತ ಸೋಪಾನವನ್ನು ಒಳಗೊಂಡಿದೆ. ಅಲ್ಲಿ ಎರಡು ಕಂಬಗಳನ್ನು ಸ್ಥಾಪಿಸಲಾಗಿದ್ದು, ಆ ಕಂಬಗಳಲ್ಲಿ ಹಂಸ, ಪದ್ಮ, ಕೇತಕಿ, ಜೋಗಿ, ಹನುಮ, ಆನೆ, ಸರ್ಪಗಳಿವೆ. ಬಲ ಕಂಬದಲ್ಲಿ ಜಲಚರ ಪ್ರಾಣಿಗಳು ಕಂಡುಬರುತ್ತದೆ. ಮುಂಭಾಗದಲ್ಲಿ ಮುಖಚತುಷ್ಕಿ, ಚಿಕ್ಕ ಮುಖಮಂಟಪವಿದೆ.

ರತ್ನಾಪುರಿಯ ಆಂಜನೇಯ ದೇವಾಲಯವು ಹುಣಸೂರು ತಾಲ್ಲೂಕಿನಿಂದ ಸುಮಾರು 10 ಕಿಲೋಮೀಟರ್ ದೂರದಲ್ಲಿ ಗದ್ದಿಗೆ ಮಾರ್ಗವಾಗಿ ಚಲಿಸುವಾಗ ರತ್ನಾಪುರಿ ಗ್ರಾಮವು ಸಿಗುತ್ತದೆ. ರತ್ನಾಪುರಿ ಗ್ರಾಮದ ಪೂರ್ವದಿಕ್ಕಿನಲ್ಲಿ ಆಂಜನೇಯ ದೇವಾಲಯವನ್ನು ಕಾಣಬಹುದು. ಆಂಜನೇಯ ದೇವಾಲಯದ ವಾಸ್ತುವನ್ನು ಗಮನಿಸಿದಾಗ ಗರ್ಭಗುಡಿ ಮತ್ತು ಅದರ ಮುಂದಿರುವ 8 ಕಂಬಗಳನ್ನು ನೋಡಬಹುದು. ಈ ಕಂಬಗಳನ್ನು ಗಮನಿಸುತ್ತಿದ್ದರೆ ಇದು ತೆರೆದ ಮಂಟಪವಾಗಿತ್ತೆಂದು ತಿಳಿದುಬರುತ್ತದೆ. ಗರ್ಭಗುಡಿಯಲ್ಲಿ ಕಪ್ಪುಶಿಲೆಯಿಂದ ಕೂಡಿದ ಸುಮಾರು 8 ಅಡಿ ಎತ್ತರದ ಆಂಜನೇಯನ ವಿಗ್ರಹವಿದೆ. ದೇವಾಲಯದ ಹಿಂಭಾಗದಲ್ಲಿ ಒಂದು ಶಾಸನವಿದೆ. ಶಾಸನದಲ್ಲಿ ತಿರುಮಲ ತರೀಕಲ್ಲಿನ ತಿರುಮಲ ದೇವಾಲಯದ ಬಗ್ಗೆ ಇರುವುದರಿಂದ ಈ ಆಂಜನೇಯ ದೇವಾಲಯವು ಸಹ ವಿಜಯನಗರ ಕಾಲದ ದೇವಾಲಯವಿರಬಹುದು ಎಂದು ಹೇಳಬಹುದು.

ಆಂಜನೇಯ ದೇವಾಲಯದ ಮುಂದೆ ಒಂದು ಪಾಳು ಬಿದ್ದ ದೇವಾಲಯವನ್ನು ಕಾಣಬಹುದು. ಅತ್ಯಂತ ಪ್ರಾಚೀನವಾದ ಕಲ್ಲಿನ ಕಟ್ಟಡವಾಗಿದ್ದು, ಅದರ ಮೇಲಿನ ಕಚ್ಚು ಗಾರೆಯನ್ನು ಗಮನಿಸಿದರೆ, ಇಟ್ಟಿಗೆಯ ಆಕಾರವನ್ನು ನೋಡಿದರೆ, ವಿಜಯನಗರ ಕಾಲದ ದೇವಾಲಯವಿರಬಹುದೆಂದು ಹೇಳಬಹುದು. ಬರಿ ಕಲ್ಲುಗಳ ಮೇಲೆ ಗೋಪುರವಿರುವುದು ನೋಡಲು ಸಿಗುತ್ತದೆ. ಅಂದರೆ ಮುಂದಿನ ಎಲ್ಲಾ ಭಾಗಗಳು ಕೆಳಗೆ ಮುಚ್ಚಿಹೋಗಿದೆ ಎಂದು ಹೇಳಬಹುದು. ಅದರ ಒಳಗೆ ಸುಂದರವಾದ ಭುವನೇಶ್ವರಿಯನ್ನು ಕಾಣಬಹುದು. ಪದ್ಮದಿಂದ ಅಲಂಕೃತಿಗಳಿಂದ ಕೂಡಿದ ಈ ಭುವನೇಶ್ವರಿಯು ಕಮಲದ ಮೊಗ್ಗನ್ನು ಒಳಗೊಂಡಿದೆ. ಅಲ್ಲೇ ಪಕ್ಕದಲ್ಲಿ ಒಂದು ಮಹಾಪದ್ಮವು ಸಹ ಸುಂದರವಾದ ಅಲಂಕರಣಗಳಿಂದ ನೆಲದ ಮೇಲೆ ಬಿದ್ದಿದೆ. ಅದರ ಪಕ್ಕದಲ್ಲೇ ಒಂದು ಒಕ್ಕೈಮಾಸ್ತಿಗಲ್ಲನ್ನು ಸಹ ಕಾಣಬಹುದು. ಮತ್ತೊಂದು ಶಿಲ್ಪದಲ್ಲಿ ಹಂದಿಗಳನ್ನು ಬೇಟೆಯಾಡುತ್ತಿರುವ ದೃಶ್ಯವು ಕಂಡುಬರುತ್ತದೆ. ಎರಡು ಹಂದಿಗಳನ್ನು ಇಬ್ಬರು ಬೇಟೆಗಾರರು ಬೇಟೆಯಾಡುತ್ತಿದ್ದಾರೆ. ಮತ್ತೊಂದು ಶಿಲ್ಪದಲ್ಲಿ ಭಕ್ತಳು ಕೈಮುಗಿದು ನಿಂತಿರುವ ದೃಶ್ಯ ಕಂಡುಬರುತ್ತದೆ.

**ಅಧ್ಯಯನಕ್ಕೆ ಬಳಸಿಕೊಂಡಿರುವ ಗ್ರಂಥಗಳು**

1. ಅಪರ್ಣ, ಕೂ. ಸ. ದೇವಾಲಯ ವಾಸ್ತುಶಿಲ್ಪ ಪರಿಚಯ, ಹಂಪಿ, 1999
2. ಅನಂತ ರಂಗಾಚಾರ್ಯ. ಎನ್. ಕರ್ನಾಟಕ ವಾಸ್ತುಶಿಲ್ಪ, ಮೈಸೂರು, 1972
3. ಚಿದಾನಂದಮೂರ್ತಿ. ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ–1. ಬೆಂಗಳೂರು, 2002
4. ಬಾಲ ಸುಬ್ರಮಣ್ಯ, ವಾಸುದೇವನ್ ಸಿ. ಎಸ್. ಕರ್ನಾಟಕ ದೇವಾಲಯ ಕೋಶ, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ, 2007
5. ಗೋಪಾಲ್ ಬಾ.ರ. ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, 2010
6. ಲಕ್ಷ್ಮೀನಾರಾಯಣ. ಎನ್, ಕರ್ನಾಟಕದ ಅರಸು ಮನೆತನಗಳು, 1969
7. ಶ್ರೀನಿವಾಸಮೂರ್ತಿ ಎಚ್.ವಿ, ಇತಿಹಾಸ ಸಂಶೋಧನಾ ಸಮೀಕ್ಷೆ, ಪದ್ಮ ಪ್ರಕಾಶನ, 2000
8. ಶ್ರೀನಿವಾಸನ್ ಪಿ.ಆರ್. ದಕ್ಷಿಣ ಭಾರತದ ದೇವಾಲಯಗಳು, (ಮದರಾಸ್ ಮ್ಯುಸಿಯಮ್, ಅನುವಾದಕರು, ಕೆ.ಎನ್.ಶ್ರೀಹರಿ) 1959
9. ಇತಿಹಾಸ ಮತ್ತು ಪುರಾತತ್ವ, ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2009
10. ಮೈಸೂರು ದರ್ಶನ, ಕರ್ನಾಟಕ ರಾಜ್ಯ ಮಕ್ತವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಮೈಸೂರು, ಸಂಪುಟ–1, 2011